ಸಹಕಾರಸಂಘ ಇದೆ. ಅಲ್ಲಿ ಒಂದು ಕೋಟಿಗೂ ಮೀರಿ ಹಣದ ವ್ಯವಹಾರ ನಡೆಯುತ್ತಿದೆ. ಆದರೆ ಅಲ್ಲಿಯೂ ಸಹ ಕಳೆದ ಎರಡು ವರ್ಷಗಳಿಂದ ಚುನಾವಣೆ ನಡೆಸುವುದಕ್ಕೆ ಆಗಿಲ್ಲ. ಜನರಲ್ ಬಾಡಿ ಮೀಟಿಂಗ್ ನಡೆಸುವುದಕ್ಕೂ ಆಗಿಲ್ಲ. ಈ ಕಾರಣದಿಂದ ಈ ಸಹಕಾರ ಸಂಘಗಳನ್ನು ಎರಡಂ ವಿಭಾಗ ಗಳನ್ನಾಗಿ ಮಾಡಿ ಯಾವ ಯಾವ ಸಹಕಾರ ಸಂಘಗಳಲ್ಲಿ ಸರ್ಕಾರದ ಪ್ರವೇಶ ಇರುವುದಿಲ್ಲವೋ ಮತ್ತು ಸರ್ಕಾರದ ಹಣವನ್ನು ತೊಡಗಿಸಿರುವುದಿಲ್ಲವೋ ಅಂತಹ ಸಹಕಾರಸಂಘಗಳಿಗೆ ಸಂಪೂರ್ಣವಾದಂಥ ಸ್ವಾತಂತ್ರ್ಯ ಕೊಡುವುದರ ಜೊತೆಗೆ ಅಲ್ಲಿ ಚುನಾವಣೆ ನಡೆಸುವುದಕ್ಕೆ ಮತ್ತು ಜನರಲ್ ಬಾಡಿ ಮೀಟಿಂಗ್ ನಡೆಸಲು ಅವಕಾಶ ಮಾಡಿಕೊಡುತ್ತೀರಾ ಇಂತಹ ಸಹಕಾರ ಸಂಘಗಳಲ್ಲಿ ಚುನಾವಣೆ ನಡೆಸುವುದಕ್ಕೆ ಸಾಧ್ಯವಾಗದಿದ್ದರೆ ಜನರಲ್ ಬಾಡಿ ಮೀಟಿಂಗ್ ಆದರೂ ನಡೆಯಬೇಕೆಂದು ಆದೇಶ ಕೊಡುತ್ತೀರಾ

ಶ್ರೀ ಎಚ್. ಸಿ. ಶ್ರೀಕಂಠಯ್ಯ —ಇದನ್ನು ಪರಿಶೀಲನೆ ಮಾಡುತ್ತೇವೆ.

Establishment of a Starch Factory in Bijapur District

748 SRI V. V. PATTAR(Jamkhadi). -Will the Chief Minister be pleased to state:—

(a) whether it is a fact that there is abundant production of mazi (i.e.. nearly a million qnintals per year) in G.D.B.C. area of Bijapur District.

(b) whether it is a fact that there is no public sector or joint sector indurstry in Bijpur District in this regard.

(c) If so, whether the Government would consider to establish a starch factory in this area ?

SRI R. GUNDURAO (Chif Minister).—

(a) The estimated production in 1980-81 was about 500,000 quintals and in 1981-82 about 600,000 quintals.

(b) Yes.

(c) No. But Government is prepared to extend all help if enterpreneurs come forward to set up starce industry in Bijapur district.

ಶ್ರೀ ವಿ.ವಿ. ಪತ್ತಾರ್.—ಬಿಜಾಪುರ ಜಿಲ್ಲೆಯ ಘಟಪ್ರಭಾ ಎಡದಂಡೆ ನಾಲೆಯ ಕ್ಷೇತ್ರದಲ್ಲಿ ಸುಮಾರು ೬ ಲಕ್ಷ ಕ್ವಿಂಟಾಲ್ ಗೋವಿನ ಜೋಳವನ್ನು ಬೆಳೆಯಲಾಗುತ್ತಿದೆ ಎಂಬುದನ್ನು ಸರ್ಕಾರ ಒಪ್ಪಿಕೊಂಡಿದೆ. ಈ ಒಕ್ಕಲುತನದಿಂದ ಬರುವಂತಹ ಈ ಸರಕನ್ನು ಸರಿಯಾಗಿ ಉಪಯೋಗಿಸಲು ಅಲ್ಲಿ ಯಾವ ಕಾರ್ಖಾನೆಗಳೂ ಇಲ್ಲ. ಇದರಿಂದ ಎಣ್ಣೆ, ಗ್ಲೂಕೋಸ್ ಮುಂತಾದ ವಸ್ತುಗಳನ್ನು ತಯಾರು ಮಾಡಬಹುದು. ಆದರೆ ದಕ್ಷಿಣ ಹಿಂದೂಸ್ಥಾನದಲ್ಲಿಯೇ ಇಂತಹ ಒಂದು ಗಂಜಿ ಕಾರ್ಖಾನೆ ಇಲ್ಲವೆಂದರೆ ಅತ್ಯಾಶ್ಚರ್ಯವಿಲ್ಲ. ನಮ್ಮ ಉತ್ತರ ಕರ್ನಾಟಕದಲ್ಲಿಯೂ ಸಹ ಇಂತಹ ಕಾರ್ಖಾನೆ ಸಾರ್ವಜನಿಕರ ಅಥವಾ ಸಂಯುಕ್ತ ಕ್ಷೇತ್ರಗಳಲ್ಲಿ ಇಲ್ಲವೆಂಬುದನ್ನು ಸರ್ಕಾರ ಒಪ್ಪಿದೆ. ಆದಕಾರಣ ನಮ್ಮ ಬಿಜಾಪುರ ಜಿಲ್ಲೆಕೈಗಾರಿಕೆಯಲ್ಲಿ ಅತ್ಯಂತ ಹಿಂದುಳಿದಿರುವುದರಿಂದ ಅಲ್ಲಿ ಜಾಯಿಂಟ್ ಸೆಕ್ಟಾರ್‌ನಲ್ಲಿ ಇಂತಹ ಒಂದು ಕಾರ್ಖಾನೆಯನ್ನು ಪ್ರತಕ್ಕೆ ಪ್ರಾರಂಭ ಮಾಡಬಾರದು

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ಬಿಜಾಪುರದಲ್ಲಿ ಹಾಗೂ ಜಮಖಂಡಿ, ಮುಧೋಳ್, ಬಿಳಗಿ ತಾಲ್ಲೂಕ್‌ಗಳಲ್ಲಿ ಮುಸುಕಿನ ಜೋಳವನ್ನು ಹೆಚ್ಚಾಗಿ ಬೆಳೆಯುತ್ತಿದ್ದಾರೆ. ಈ ರೀತಿ ಹೆಚ್ಚಿನ ಪ್ರಮಾಣದಲ್ಲಿ ಬೆಳೆಯುತ್ತಿರುವ ಜೋಳವನ್ನು ಪೂರ್ಣಪ್ರಮಾಣದಲ್ಲಿ ಉಪಯೋಗಿಸಿಕೊಳ್ಳಲು ಅಲ್ಲಿ ಒಂದು ಗಂಜಿ

ಕಾರ್ಖಾನೆಯನ್ನು ಪಬ್ಲಿಕ್ ಸೆಕ್ಟಾರ್‌ನಲ್ಲಿಯಾಗಲೀ ಅಥವಾ ಜಾಯಿಂಟ್ ಸೆಕ್ಟಾರ್‌ನಲ್ಲಿಯಾಗಲಿ ಏತಕ್ಕೆ ಪ್ರಾರಂಭ ಮಾಡಬಾರದೆಂದು ಮಾನ್ಯ ಸದಸ್ಯರು ಪ್ರಶ್ನೆ ಕೇಳಿದ್ದಾರೆ. ಆದರೆ ಇದರ ಬಗ್ಗೆ ಸರ್ಕಾರ ಯೋಚನೆ ಮಾಡಿಲ್ಲ. ಇದನ್ನು ಪಬ್ಲಿಕ್ ಸೆಕ್ಟಾರ್‌ನಲ್ಲಾಗಲಿ ಅಥವಾ ಜಾಯಿಂಟ್ ಸೆಕ್ಟಾರ್‌ನಲ್ಲಾಗಲಿ ಹಾಕುವ ಉದ್ದೇಶವಿಲ್ಲಾ. ಆದರೆ ಖಾಸಗಿಯವರು ಮುಂದೆ ಬಂದರೆ ಸರ್ಕಾರದವರು ಅವರಿಗೆ ಯಾವ ರೀತಿಯಾಗಿ ಸಹಾಯ ಮಾಡಬೇಕೋ ಮತ್ತು ಯಾವ ರೀತಿಯಾಗಿ ಅವರಿಗೆ ಸಹಕಾರ ಕೊಡಬೇಕೋ ಅದನ್ನು ಕೊಡುತ್ತಾರೆ. Government is not intending to put any project of that type. ಖಾಸಗಿಯವರು ಬೇಕಾದರೆ ಸರ್ಕಾರದವರ ಸಹಾಯವನ್ನು ತೆಗೆದುಕೊಂಡು ಮುಂದೆ ಬಂದು ಸ್ಪಾರ್ಜ್ ಫ್ಯಾಕ್ಟರಿಯನ್ನು ಹಾಕಬಹುದು.

ಶ್ರೀ ವಿ.ವಿ. ಪತ್ತಾರ್.—ಅಧ್ಯಕ್ಷರೇ, ಇದು ೧೨ ಕೋಟಿ ರೂಪಾಯಿಗಳ ಯೋಜನೆ. ಖಾಸಗೀ ಮಾಲೀಕರ ಒಡೆತನದಲ್ಲಿ ಈ ಒಂದು ಕಾರ್ಖಾನೆಯನ್ನು ಸ್ಥಾಪನೆ ಮಾಡಿದರೆ ಬಹುತೇಕವಾಗಿ ರೈತರ ಶೋಷಣೆಯಾಗುತ್ತದೆ. ಇದಕ್ಕೆ ಬೇಕಾಗುವ ಸುಮಾರು 1–1½ ಕೋಟಿ ರೂಪಾಯಿ ಹಣವನ್ನು ಈ ವಕ್ಕಲುತನದವರಿಂದಲೇ ಕೂಡಿಸಿ ಕೊಡಬೇಕಾಗುತ್ತದೆ. ಈವೊತ್ತಿನ ದಿವಸ ವಕ್ಕಲಿಗರ ಪರಿಸ್ಥಿತಿ ಯಾವ ರೀತಿ ಇದೆ ಎಂಬುದು ಎಲ್ಲರಿಗೂ ಗೊತ್ತಿರುವ ವಿಚಾರ. ಈ ದೃಷ್ಟಿಯಿಂದ ಮಾನ್ಯ ಮಂತ್ರಿಗಳಲ್ಲಿ ಅತ್ಯಂತ ಕಳಕಳಿಯಿಂದ ಕೇಳಿಕೊಳ್ಳುವುದೇನೆಂದರೆ ಈ ರೈತರ ಶೋಷಣೆಯನ್ನು ತಪ್ಪಿಸುವ ದೃಷ್ಟಿಯಿಂದ ಮತ್ತು ಇದಕ್ಕಾಗಿ ಬೇಕಾಗುವ ಹಣದ ಶೇಖರಣೆ ಮಾಡುವುದಕ್ಕೆ ಈವೊತ್ತಿನ ದಿವಸ ಬಹಳ ದುಸ್ತರವಾಗಿರುವುದರಿಂದ ಈ ಒಂದು ಕಾರ್ಖಾನೆಯನ್ನು ಸರ್ಕಾರದವರೇ ಏತಕ್ಕೆ ಸ್ಥಾಪನೆ ಮಾಡಬಾರದು ಎಂದು ಕೇಳಬಯಸುತ್ತೇನೆ.

ಉಪಾಧ್ಯಕ್ಷರು.—ಆಗುವುದಿಲ್ಲ ಅಂತ ಮೊದಲೇ ಉತ್ತರ ಹೇಳಿದರಲ್ಲಾ

ಶ್ರೀ ವಿ.ವಿ. ಪತ್ತಾರ್.—ನಾನು ಇದನ್ನು ಅವರು ಪುನರ್‌ವಿಚಾರಣೆ ಮಾಡಲಿ ಅಂತ ಹೇಳುತ್ತಿದ್ದೇನೆ. ಏತಕ್ಕೆಂದರೆ ಇದನ್ನು ಖಾಸಗೀ ರಂಗದಲ್ಲಿ ಮಾಡಿದರೆ ಇದರಿಂದ ರೈತರ ಶೋಷಣೆಯಾಗುತ್ತದೆ, ಮೇಲಾಗಿ ರೈತರಿಗೂ ಏನೂ ಪ್ರಯೋಜನವಾಗುವುದಿಲ್ಲ, ರೈತನಿಗೆ ಸರಿಯಾದ ಬೆಲೆಯೂ ಬರುವುದಿಲ್ಲ. ವಕ್ಕಲಿಗರ ಕಷ್ಟಸುಖಗಳು ತಮಗೆ ಗೊತ್ತಿದೆ, ನಾನೇನೂ ಬೇರೆ ಹೇಳಬೇಕಾಗಿಲ್ಲಾ. ಇದನ್ನು ತಪ್ಪಿಸುವ ದೃಷ್ಟಿಯಿಂದ ಸರ್ಕಾರದವರೇ ಏತಕ್ಕೆ ಈ ಕಾರ್ಖಾನೆಯನ್ನು ಸ್ಥಾಪನೆ ಮಾಡಬಾರದು ಎಂದು ನಾನು ಕೇಳುತ್ತೇನೆ.

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ಇದಕ್ಕೆ ನಾನು ಮೊದಲೇ ಉತ್ತರ ಹೇಳಿದ್ದೇನೆ.

ಶ್ರೀ ಡಿ. ಟಿ. ರಾಮು.—ಆ ಪ್ರದೇಶದಲ್ಲಿ ಈ ಸ್ಪಾರ್ಜ್ ಫ್ಯಾಕ್ಟರಿಯನ್ನು ಹಾಕಬೇಕಾದರೆ ಅದಕ್ಕೆ ಬೇಕಾಗತಕ್ಕಂಥಾ ಕಚ್ಚಾ ಸಾಮಗ್ರಿ ದೊರೆಯುವುದು ನಿಜವಾಗಿದ್ದರೆ ಅಲ್ಲೇ ಈ ಒಂದು ಕಾರ್ಖಾನೆಯನ್ನು ಸ್ಥಾಪನೆ ಮಾಡುವುದರ ಮೂಲಕ ಜನಸಾಮಾನ್ಯರ ಆರ್ಥಿಕ ಮಟ್ಟವನ್ನೂ ಉತ್ತಮಪಡಿಸಲು ಸರ್ಕಾರವೇ ಈ ಕಾರ್ಖಾನೆಯನ್ನು ಸರ್ಕಾರೀ ರಂಗದಲ್ಲಿ ಏತಕ್ಕೆ ಸ್ಥಾಪನೆ ಮಾಡಬಾರದು

ಉಪಾಧ್ಯಕ್ಷರು.—ಮಾನ್ಯ ಮಂತ್ರಿಗಳು ಅದಕ್ಕೆ ಮೊದಲೇ ಉತ್ತರ ಹೇಳಿದ್ದಾರೆ.

ಶ್ರೀ ಡಿ. ಟಿ. ರಾಮು.—ಸ್ವಾಮಿ, ಇದು ೧೨ ಕೋಟಿ ರೂಪಾಯಿ ಯೋಜನೆ, ಇಷ್ಟು ದೊಡ್ಡ ಮೊತ್ತವನ್ನು ಅಲ್ಲಿ ಕೂಡಿಸುವುದಕ್ಕೆ ಬಹಳ ಕಷ್ಟವಾಗುತ್ತದೆ, ಆದುದರಿಂದ ಇದನ್ನು ಅವರು ಪುನರ್ವಿಚಾರ ಮಾಡಲಿ ಎಂದು ಹೇಳುತ್ತಿದ್ದೇನೆ.

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ಆಗುವುದಿಲ್ಲ ಅಂತ ಮೊದಲೇ ಹೇಳಿದೆ.

ಶ್ರೀ ವಿ.ವಿ. ಪತ್ತಾರ್.—ಒಂದುವೇಳೆ ಈ ಕಾರ್ಖಾನೆಯನ್ನು ಸರ್ಕಾರದವರಿಂದ ಸ್ಥಾಪನೆ ಮಾಡಲಿಕ್ಕೆ ಆಗದೇ ಹೋದರೆ, ಹೇಗಾದರೂ ತಾವು ಸಹಕಾರ ಮಂತ್ರಿಗಳಾಗಿದ್ದೀರಿ, ಆದುದರಿಂದ ಕೋ ಆಪರೇಷನ್ ಸೆಕ್ಟಾರ್‌ನಲ್ಲಾದರೂ ಕೂಡ ಸ್ಥಾಪನೆ ಮಾಡುವುದಕ್ಕೆ ಯೋಜನೆ ಮಾಡುತ್ತೀರಾ ?

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ಅದು ಒಳ್ಳೆಯ ಸಲಹೆ, ಅದನ್ನು ಯೋಚನೆ ಮಾಡೋಣ.